# ಸೈಂಟ್ ಜೋಸೆಫ್ ಕಾಲೇಜಿಗೆ ವಿವಿ ಸ್ಥಾನಮಾನ

ಬೆಂಗಳೂರು, ಜು.12: ನಗರದಲ್ಲಿರುವ ಸೈಂಟ್ ಜೋಸೆಫ್ ಕಾಲೇಜಿಗೆ ವಿಶ್ವವಿದ್ಯಾನಿಲಯದ ಸ್ಥಾನಮಾನವನ್ನು ನೀಡಲಾಗಿದೆ ಎಂದು ಜೋಸೆಫ್ ಕಾಲೇಜು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಫಾದರ್ ಸ್ವೀಬರ್ಟ್ ಡಿ'ಸಿಲ್ವಾ ತಿಳಿಸಿದ್ದಾರೆ.

ಮಂಗಳವಾರ ಪ್ರೆಸ್‌ಕ್ಲಬ್‌ನಲ್ಲಿ ಮಾತನಾಡಿದ ಅವರು, 2021ರ ಫೆ.23ರಂದು ಕರ್ನಾಟಕ ಸರಕಾರವು ಅಂಗೀಕರಿಸಿತ್ತು. ಈಗ ಕಾಯ್ದೆಯಲ್ಲಿ ಕಾಲೇಜಿಗೆ ಸ್ವಾಯತ್ತತೆಯೊಂದಿಗೆ ವಿಶ್ವವಿದ್ಯಾಲಯವಾಗಲು ದಾರಿ ಮಾಡಿ ಕೊಟ್ಟಿದೆ. ಕಳೆದ ವಾರ ಔಪಚಾರಿಕವಾಗಿ ಸೈಂಟ್ ಜೋಸೆಫ್ ಕಾಲೇಜನ್ನು ವಿವಿಯಾಗಿ ಘೋಷಣೆ ಮಾಡಲಾಯಿತು ಎಂದರು.